Mr. SPEAKER.—I think that question was put.

Smt. GRACE TUCKER.—There was lack of funds; secondly the Local Bodies Act which brought the Taluk Board into the picture.

Major and Minor Tanks in Chickmagalur District.

*Q.—1023. Smt. B. L. SUBBAMMA (Chickmagalur).—

Will the Government be pleased to state :—

(*a*) the number of major and minor tanks in Chickmagalur District;

(*b*) the number and names of major tanks in the said District which have an atchkat area of more than 1,000 acres of lands;

(*c*) the departments that are responsible for maintenance of these tanks?

A.—Sri ALUR HANUMANTHAPPA (Deputy Minister for Minor Irrigation).—

(*a*) Major tanks ... 117
Minor tanks ... 2,327

(*b*) Five:

1. Belvadi Doddakere, Chickmagalur Taluk;
2. Madag Tank;
3. Birur Devanakere;
4. Iyyanakere;
5. Kukkasamudra.

(*c*) Belvadi Doddakere is maintained by Revenue authorities.

Other four tanks are maintained by the Public Works Department.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—(ಸಿ) ಗೆ ಉತ್ತರವಾಗಿ 117 ದೊಡ್ಡ ಕೆರೆಗಳು ಇವೆ. ಅದರಲ್ಲಿ ನಾಲ್ಕು ಕೆರೆಗಳನ್ನು ಪಿಡಬ್ಲ್ಯೂಡಿ ನವರು ಮತ್ತು ಒಂದು ಕೆರೆಯನ್ನು ರೆವಿನ್ಯೂ ಇಲಾಖೆಯವರ ನಿರ್ವಾಹ ಮಾಡುತ್ತಾ ಇದ್ದಾರೆ ಎಂದು ಹೇಳಿದ್ದೀರಿ. ಇನ್ನುಳಿದ ಕೆರೆಗಳನ್ನು ಯಾರು ನೋಡಿಕೊಳ್ಳುತ್ತಾ ಇದ್ದಾರೆ?

†ಶ್ರೀ ಆಲೂರು ಹನುಮಂತಪ್ಪ.—ಇಪತ್ತಿನವರೆಗೂ ರೆವೆನ್ಯೂ ಮೇನ್‌ಟೇನ್ಡ್ ಟ್ಯಾಂಕ್ಸ್ ಎಂತಲೇ ಇದೆ. ಆ ಕೆರೆಗಳನ್ನು ಪಿ. ಡಬ್ಲ್ಯೂ. ಡಿ. ಅವರಿಗೆ ವಹಿಸಬೇಕಾದರೆ ಎಷ್ಟು ಅಚ್ಚುಕಟ್ಟು ಇರುವ ಕೆರೆಗಳನ್ನು ಕೆಗೆ ತಕೊಳ್ಳಬೇಕೆಂಬ ವಿಷಯ ಸರ್ಕಾರದ ಪರ ತೀವ್ರ ಪರಿಶೀಲನೆಯಲ್ಲಿದೆ?

ಶ್ರೀಮತಿ ಬಿ. ಎಲ್ ಸುಬ್ಬಮ್ಮ.—ಈ 5ಕೆರೆಗಳಿಗೆ ಎಷ್ಟು ಅಚ್ಚುಕಟ್ಟು ಇದೆ?

ಶ್ರೀ ಆಲೂರು ಹನುಮಂತಪ್ಪ.—2,674 ಎಕರೆ ಆಚ್ಚುಕಟ್ಟು ಇದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.— ಅಯ್ಯನ ಕೆರೆ ಮೇಲ್ವಾಗದಲ್ಲಿ ಜಮೀನು ವ್ಯವಸಾಯಕ್ಕೆ ಕೊಟ್ಟಿರುವುದು ನಿಜವೇ?

ಶ್ರೀ ಆಲೂರು ಹನುಮಂತಪ್ಪ.—ಹಿಂದೆ ಆಗಲೇ ಪ್ರಶ್ನೆ ಹಾಕಿದ್ದಿರಿ, ಆ ಬಗ್ಗೆ ತನಿಖೆ ನಡೆಯುತ್ತಾ ಇದೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ರೆವಿನ್ಯೂ ಇಲಾಖೆಯ ನಿರ್ವಹಣೆಯಲ್ಲಿರುವ ಕೆರೆಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂಬ ವಿಷಯ ತೀವ್ರ ಆಲೋಚನೆಯಲ್ಲಿದೆ ಎಂದು ಹೇಳುತ್ತಾ ಇದ್ದಾರೆ. ನಿಮಗಿಂತ ಹಿಂದೆ ಇದ್ದವರು ಅದಕ್ಕಿಂತ ಹಿಂದೆ ಇದ್ದವರು ಆ ಕಾಲದಿಂದ ತೀವ್ರ ಎಂದು ಹೇಳುತ್ತಾ ಇದ್ದಾರೆ, ಎಷ್ಟು ದಿವಸಗಳಿಂದ ತೀವ್ರವಾಗಿದೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಹತ್ತು ಎಕರೆಗೆ ಒಳಪಟ್ಟು ಅಚ್ಚುಕಟ್ಟು ಇರತಕ್ಕ ಕೆರೆಗಳನ್ನು ತಾಲ್ಲೂಕು ಬೋರ್ಡಿನವರಿಗೇ ವಹಿಸಿಕೊಡಲಾಗಿದೆ. ಅಂತಹ 16,000ಕೆರೆಗಳು ಇವೆ. ಬಾಕಿ ಉಳಿಕೆಯಾಗಿರತಕ್ಕ 22,000 ಕೆರೆಗಳ ಬಗ್ಗೆ ಸರ್ಕಾರದವರು ತೀವ್ರ ಪರಿಶೀಲನೆ ಮಾಡುತ್ತಾ ಇದ್ದಾರೆ. ಕೋಟ್ಯಾಂತರ ರೂಪಾಯಿ ಹಣ ಸಹ ಬೇಕಾಗಿದೆ. ಪಿ. ಡಬ್ಲ್ಯು. ಡಿ. ಅವರ ವಶಕ್ಕೆ ಎಷ್ಟು ಕೆರೆಗಳನ್ನು ತೆಗೆದುಕೊಳ್ಳಬಹುದು ಎಂಬುದನ್ನು ತೀವ್ರ ಆಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರಲಾಗುತ್ತದೆ ಎಂದು ಹೇಳಿದೆ.

Sri H. R. KESHAVAMURTHY.—What are the departments that are responsible for the maintenance of the tanks ?

ಶ್ರೀ ಆಲೂರು ಹನುಮಂತಪ್ಪ.—ಪಿ. ಡಬ್ಲ್ಯು. ಡಿ. ಅವರ ಕಂಟ್ರೋಲಿಗೆ ಬಂದಿರತಕ್ಕ ಕೆರೆಗಳನ್ನು ಅವರು ಮೇನ್‌ಟೇನ್ ಮಾಡುತ್ತಾರೆ. ಬಾಕೀದನ್ನು ರೈತರೇ ಮೇನ್‌ಟೇನ್ ಮಾಡಿಕೊಳ್ಳಬೇಕಾಗುತ್ತದೆ, ರಿಪೇರಿ ಕೆಲಸ ಪಿ. ಡಬ್ಲ್ಯು. ಡಿ. ಅವರು ಮಾಡುತ್ತಾ ಇದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಕೆರೆಯನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಪ್ರಯತ್ನ ಮಾಡುತ್ತೇವೆ.

Posting of Doctor to the Government Hospital at Gurmitkal.

*Q.—1036. Sri VIDYADHAR GURUJI SAYANNA (Gurmitkal).—

Will the Government be pleased to state:—

(*a*) since how long the post of doctor at the Government Hospital, Gurmitkal is vacant ;

(*b*) the reasons for the delay in posting the doctor to the said hospital so far ;

(*c*) whether they are aware that the stock of medicines in the above hospital has been sealed up ?

A.—Sri K. NAGAPPA ALVA (Minister for Health).—

(*a*) From 7-5-1963.

(*b*) Paucity of doctors.

(*c*) No.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಗುರುಮಿಟ್‌ಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 5 ತಿಂಗಳಿನಿಂದ ಡಾಕ್ಟರು ಇಲ್ಲ ಎಂದು ಹೇಳಿದ್ದೀರಿ; ಇದಕ್ಕೆ ಕಾರಣ ಏನೆಂದರೆ ಮೈದ್ಯರ ಕೊರತೆ ಎಂದು ಹೇಳಿದ್ದೀರಿ; ಹಾಗಿದ್ದ ಮೇಲೆ ಮೊದಲು ಅಲ್ಲಿದ್ದ ಡಾಕ್ಟರನ್ನು ಅಲ್ಲಿಂದ ಬೇರೆ ಕಡೆಗೆ ಕಳುಹಿಸಲಿಕ್ಕೆ ಕಾರಣವೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಡಾಕ್ಟರು ಅಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟು ಇದ್ದರು ಅಲ್ಲದೇ ಟ್ರಾನ್ಸ್‌ಫರ್‌ಬೇಕೆಂದು ಕೇಳಿಕೊಂಡಿದ್ದರು; ಆದ್ದರಿಂದ ಟ್ರಾನ್ಸ್‌ಫರ್ ಮಾಡಿದೆ. ಡಿಫೆನ್ಸ್ ಸರ್ವೀಸಿಗೂ ಕೂಡ ಅವರು ಸೇರಿದ್ದಾರೆ.

ಶ್ರೀ ವಿದ್ಯಾಧರ ಗುರೂಜಿ ಸಾಯಣ್ಣ.—ಅಲ್ಲಿ ಸರಿಯಾದ ವ್ಯವಸ್ಥೆ ಮಾಡಲಾರದೇ ಎಂದರೆ ಬೇರೆ ಡಾಕ್ಟರ ವ್ಯವಸ್ಥೆ ಮಾಡದೇ ಇದ್ದ ಡಾಕ್ಟರನ್ನು ಅಲ್ಲಿಂದ ಕಳುಹಿಸುವುದು ಸರ್ಕಾರದ ಅಯೋಗ್ಯತನ ತೋರಿಸುವುದಿಲ್ಲವೇ ?

Mr. SPEAKER.—I know that the hon. member did not mean anything. If he wants let him put a question in Hindi.

ಶ್ರೀ ಕೆ. ನಾಗಪ್ಪ ಆಳ್ವ.—ಅಯೋಗ್ಯತನ ಎಂಬ ಶಬ್ದಕ್ಕೆ ಉತ್ತರ ಕೊಡಬೇಕೇ, ಸ್ವಾಮಿ ? (ಸಭೆಯಲ್ಲಿ ನಗು).